**ಡಾ|| ಸುಭಾಷ್ ಚಂದ್ರ ಖುಂಟಿಆ**
ಮುಖ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

# 320, 3ನೇ ಮಹಡಿ
ವಿಧಾನ ಸೌಧ ಬೆಂಗಳೂರು – 560 001
*e-mail : cs@karnataka.gov.in*
ದೂ. ಸಂಖ್ಯೆ: +91-80-22252442 / 22253716
ಫ್ಯಾಕ್ಸ್ : +91-80-22258913

**ಅ.ಸ.ಪ.ಸಂಖ್ಯೆ: ಮಮಇ 122 ಮಮಅ 2016** ದಿನಾಂಕ:28-01-2017.

ಮಾನ್ಯರೇ,

ಜಸ್ಟೀಸ್ ಶಿವರಾಜ್.ವಿ. ಪಾಟೀಲ್‌ರವರ ಅಧ್ಯಕ್ಷತೆಯ **ಕರ್ನಾಟಕ ರಾಜ್ಯದಲ್ಲಿನ ಬಾಲ್ಯವಿವಾಹ ತಡೆ ಬಗೆಗಿನ** ಕೋರ್ ಕಮಿಟಿಯ ವರದಿಯ ಶಿಫಾರಸ್ಸಿನಂತೆ ವಿವಿಧ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್, ಗ್ರಾಮ, ಸಿಟಿ ಕಾರ್ಪೋರೇಷನ್ ಮತತು ಮುನ್ಸಿಪಾಲಿಟಿ ಮಟ್ಟದ ಅಧಿಕಾರಿ/ಸಿಬ್ಬಂದಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಮಮಇ 377 ಎಸ್‌ಡಬ್ಲ್ಯೂಡಬ್ಲ್ಯೂ 2004, ದಿನಾಂಕ:02-05-2008 ಮತ್ತು ಸೇರ್ಪಡೆ ಆದೇಶ ಸಂಖ್ಯೆ: ಮಮಇ 171 ಎಸ್‌ಡಬ್ಲ್ಯೂಡಬ್ಲ್ಯೂ 2011, ದಿನಾಂಕ:16-11-2011ರಲ್ಲಿ ನೇಮಿಸಲಾಗಿದೆ (ಅಧಿಸೂಚನೆಗಳ ಪ್ರತಿ ಲಗತ್ತಿಸಿದೆ).

ದಿನಾಂಕ:19-11-2016 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿಯ ಸಭೆಯಲ್ಲಿ ಬಾಲ್ಯವಿವಾಹ ನಿಷೇಧದ ಕುರಿತು ವಿವಿಧ ಇಲಾಖೆಗಳು ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಸದರಿ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಗಿನ ಕ್ರಮ ಕೈಗೊಳ್ಳಲು ಕೋರಿದೆ.

1. ವಿವಿಧ ಇಲಾಖೆಗಳ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಬಾಲ್ಯವಿವಾಹಗಳನ್ನು ತಡೆಯಲು ನೋಡಲ್ ಇಲಾಖೆಯಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಪೂರ್ಣ ಸಹಕಾರ ನೀಡುವುದು. ಬಾಲ್ಯವಿವಾಹಗಳು ನಡೆದ ಪ್ರಕರಣಗಳಲ್ಲಿ ಕಡ್ಡಾಯವಾಗಿ ದೂರು ದಾಖಲಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
2. ಬಾಲ್ಯವಿವಾಹ ನಿಷೇಧ ಕರ್ನಾಟಕ ನಿಯಮಾವಳಿಗಳು 2014ರ ನಿಯಮ ಸಂಖ್ಯೆ 4 ರಲ್ಲಿ ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಕಾರ್ಯಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ ಹಾಗೂ ನಿಯಮ ಸಂಖ್ಯೆ 4(11) ರ ಶೆಡ್ಯೂಲ್ 1 ರಲ್ಲಿ ವಿವಿಧ ಇಲಾಖೆಗಳ ಬಾಲ್ಯವಿವಾಹ ನಿಷೇಧಾಧಿಕಾರಿಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ತಿಳಿಸಲಾಗಿದೆ(ಪ್ರತಿ ಲಗತ್ತಿಸಿದೆ.) ಅದರಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಕಾರ್ಯನಿರ್ವಹಿಸುವುದು ಅವರ ಕರ್ತವ್ಯವಾಗಿರುತ್ತದೆ. ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಅವರ ಗಮನಕ್ಕೆ ಬಂದ ಪ್ರತಿಯೊಂದು ಪ್ರಕರಣದ ಬಗ್ಗೆ ಸೂಕ್ತ ಸಮಯದಲ್ಲಿ ಕ್ರಮ ವಹಿಸಲು ಜವಾಬ್ದಾರರಾಗಿರುವುದಲ್ಲದೇ ಹೊಣೆಗಾರರಾಗಿರುತ್ತಾರೆಂದು ತಿಳಿಸುವುದರ ಜೊತೆಗೆ ಬಾಲ್ಯ ವಿವಾಹ ತಡೆಯಲು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ತಮ್ಮ ಇಲಾಖೆಯ ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.
3. ಬಾಲ್ಯವಿವಾಹಗಳನ್ನು ತಡೆಯುವ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯನ್ನು ರಚಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಈ ಸಮಿತಿಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುವ ಬಗ್ಗೆ ಸಂಬಧಿಸಿದವರಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.

ಅದರಗಳೊಂದಿಗೆ,

ತಮ್ಮ ವಿಶ್ವಾಸಿ,
ಎಸ್. ಸಿ. ಖುಂಟಿಆ
**(ಸುಭಾಷ್ ಚಂದ್ರ ಖುಂಟಿಆ)** 30/1/17

ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.